**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ . ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| **ಸಿ.ಸಿ. ನಂ :-** | **1114/2019** |
| **ಸಿ.ಡಬ್ಲ್ಯೂ : -15** | **ಪಿ.ಡಬ್ಲ್ಯೂ -05** |
| **ದಿನಾಂಕ :-** | **14.01.2026** |

| | |
|---|---|
| ಹೆಸರು | ನವೀನ್ ಕುಮಾರ್ |
| ತಂದೆ/ತಾಯಿ/ಗಂಡನ ಹೆಸರು | ಗೋವಿಂದರೆಡ್ಡಿ |
| ವಯಸ್ಸು | 42 ವರ್ಷ |
| ಉದ್ಯೋಗ | ಪೋಲಿಸ್ ಇನ್ಸ್ ಪೆಕ್ಟರ್ |
| ವಾಸ | ಸರ್ಜಾಪುರ |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರಾಜ್ಞ ಸ. ಸ. ಅ ರವರಿಂದ**

ದಿನಾಂಕ 20.04.2016 ರಿಂದ 30.01.2019 ವರೆಗೆ ನಾನು ಸರ್ಜಾಪುರ ಠಾಣೆಯಲ್ಲಿ ಪೋಲಿಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 11.01.2019 ರಂದು ಮಧ್ಯಾಹ್ನ 02-15 ಗಂಟೆ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಸಹಿಸಿಕೊಟ್ಟಿರುತ್ತೇನೆ. ಅದೇ ದಿನ ಚಾಸಾ-4 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಅದೇ ದಿನ ಮೃತ ಬೈಜು ಜಾಯ್ ರವರ ಶವ ಪಂಚನಾಮೆಯನ್ನು ಅತ್ತಿಬೆಲೆ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ-5 ರಿಂದ 9 ರವರ ಸಮಕ್ಷಮ ಸಂಜೆ 05-00 ರಿಂದ 07-00 ಗಂಟೆ ಸಮಯದಲ್ಲಿ ಮಾಡಿರುತ್ತೇನೆ. ಆಗ ಚಾಸಾ-8 ಮತ್ತು 9 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಮೃತರ ಶವ ಪರೀಕ್ಷೆಯನ್ನು ಮಾಡಿಸಿ, ಶವವನ್ನು ವಾರಸುದಾರರಿಗೆ ಹಸ್ತಾಂತರ ಮಾಡಿರುತ್ತೇನೆ. ಅದೇ ದಿನ ಸ್ಪರ್ಶ್ ಆಸ್ಪತ್ರೆಯಿಂದ ಗಾಯಗೊಂಡ ವ್ಯಕ್ತಿ ಮೃತರಾದ ಬಗ್ಗೆ ವರದಿಯನ್ನು ಪಡೆದಿರುತ್ತೇನೆ.

ತನಿಖೆಯನ್ನು ಮುಂದುವರೆಸಿ ದಿನಾಂಕಃ 12.01.2019 ರಂದು ಚಾಸಾ-1ರವರು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 08-00 ರಿಂದ 09-00 ಗಂಟೆಯವರೆಗೆ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಆಗ ಮೋಟಾರ್ ಸೈಕಲ್ ಸಂಖ್ಯೆ ಕೆಎ-01 ಹೆಚ್‌ಯೂ-1811 ಅನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಅದೇ ದಿನ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ನಂತರ ಮುಂದುವರೆದ ತನಿಖೆಗಾಗಿ ಕಡತವನ್ನು ಚಾಸಾ-16 ರವರಿಗೆ ಹಸ್ತಾಂತರ ಮಾಡಿರುತ್ತೇನೆ. ಪ್ರ.ವ.ವರದಿ, ಶವ ಪಂಚನಾಮೆ, ಮೃತಪಟ್ಟ ಬಗ್ಗೆ ವರದಿ, ಕಚ್ಚಾ ನಕಾಶೆ ಗಳನ್ನು ನಿಪಿ-11 ರಿಂದ 14 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-

11(ಎ), 12(ಎ), 13(ಎ) ಮತ್ತು 14(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು, ನಿಪಿ-2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

**ವಾಟೀ ಸವಾಲುಃ ಆರೋಪಿ ಪರ ಶ್ರೀ.ಬಿ.ಇ.ಎನ್. ವಕೀಲರಿಂದ**

ಪ್ರಕರಣ ದಾಖಲಿಸುವ ಮೊದಲು ನಿಪಿ-1 ರ ಬಗ್ಗೆ ಪ್ರಾಥಮಿಕ ತನಿಖೆ ಮಾಡಿಲ್ಲ ಎಂದರೆ ಸರಿ. ನಿಪಿ-2 ಮತ್ತು 14 ಅನ್ನು ನಾನು ಠಾಣೆಯಲ್ಲಿಯೇ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-4 ರವರು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ವಿಮೆ ಪರಿಹಾರ ಸಿಗಲಿ ಎಂದು ಚಾಸಾ-1ರವರು ನೀಡಿದ ದೂರಿನ್ವಯ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲದೆ ಇದ್ದರೂ ಸಹ, ಮೇಲಾಧಿಕಾರಿಗಳ ಒತ್ತಡದ ಮೇರೆಗೆ ಹಾಗೂ ಅಂಕಿಅಂಶಕ್ಕಾಗಿ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**